ಮಾರ್ಚ್ 12, 2008

## ನಿಮ್ಮ ಬ್ಯಾಂಕು ನೋಟುಗಳನ್ನು ಗೌರವಿಸಿ – ಸಾರ್ವಜನಿಕರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಮನವಿ

ಸಾರ್ವಜನಿಕರು ಬ್ಯಾಂಕು ನೋಟುಗಳನ್ನು ಹಾರ ತಯಾರಿಸುವುದಕ್ಕೆ, ಶಾಮಿಯಾನ ಮತ್ತು ಪೂಜಾ ಸ್ಥಳಗಳ ಅಲಂಕಾರಕ್ಕೆ ಅಥವಾ ಸಮಾರಂಭ ಮುಂತಾದವುಗಳಲ್ಲಿ ವ್ಯಕ್ತಿಗಳ ಮೇಲೆ ಸುರಿಮಳೆ ಮಾಡುವುದಕ್ಕೆ ಉಪಯೋಗಿಸಬಾರದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಮನವಿ ಮಾಡಿದೆ. ಇಂತಹ ಕ್ರಮಗಳಿಂದ ಬ್ಯಾಂಕು–ನೋಟುಗಳು ಕಳೆಗುಂದುವುದಲ್ಲದೇ, ಅವುಗಳ ಜೀವಿತಾವಧಿಯೂ ಕುಂಠಿತವಾಗುತ್ತದೆ. ಬ್ಯಾಂಕು ನೋಟುಗಳು ಶ್ರೇಷ್ಠತೆಯ ಪ್ರತೀಕವಾಗಿದ್ದು, ಅವುಗಳನ್ನು ಗೌರವಿಸಬೇಕು, ಅವುಗಳ ದುರ್ಬಳಕೆ ಮಾಡಬಾರದು. ಅವುಗಳ ಜೀವಿತಾವಧಿಯನ್ನು ಹೆಚ್ಚಿಸಲು ನಿಗಾವಹಿಸಬೇಕು. ಭಾರತೀಯ ರಿಸರ್ವ್ ಬ್ಯಾಂಕು, ಸ್ವಚ್ಛ ನೋಟುಗಳ ಸರಬರಾಜಿಗಾಗಿ ಎಲ್ಲ ಕ್ರಮಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿದೆ ಮತ್ತು ತನ್ನ ಈ ಪ್ರಯತ್ನಗಳಿಗೆ ತಮ್ಮ ಕೊಡುಗೆಯನ್ನೂ ನೀಡಬೇಕೆಂದು ಸಾರ್ವಜನಿಕರಲ್ಲಿ ಒತ್ತಾಯ ಪೂರ್ವಕವಾಗಿ ವಿನಂತಿಸುತ್ತದೆ.

**ಅಜಿತ್ ಪ್ರಸಾದ್**
ವ್ಯವಸ್ಥಾಪಕರು

**ಪತ್ರಿಕಾ ಪ್ರಕಟಣೆ : 2007-2008/1186**